ಕರ್ನಾಟಕ ಸರ್ಕಾರ
ಸಂಜೀವಿನಿ - ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ
*SANJEEVINI* – Karnataka State Rural Livelihood Promotion Society
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ Department of Skill Development, Entrepreneurship and Livelihood
ಸಂ.4, 2ನೇ ಮತ್ತು 3ನೇ ಮಹಡಿ, ಮೈಶುಗರ್ ಕಟ್ಟಡ, ಜೆ.ಸಿರಸ್ತೆ, ರವೀಂದ್ರ ಕಲಾ ಕ್ಷೇತ್ರದ ಎದುರು, ಬೆಂಗಳೂರು -560002.
ದೂಸಂ: 080-23564271, ಇ-ಅಂಚೆ:: nrlmkarnataka@gmail.com
No 4, 2nd& 3rd floor, My Sugar Building, JC road, Opp to Ravindra Kala Kshetra, Bangalore –560002
Ph No: 080-23564271, e-mail: nrlmkarnataka@gmail.com

No: KSRLPS/SBM-Plum/01/2023-24 ದಿನಾಂಕ:18 /11/2023

# ಜಂಟಿ ಸುತ್ತೋಲೆ

**ವಿಷಯ :** ಬಹು ಕೌಶಲ್ಯ (Multi skilling), "ನಲ್ ಜಲ್ ಮಿತ್ರ" ತರಬೇತಿಗೆ ಸದಸ್ಯರನ್ನು ನಿಯೋಜಿಸುವ ಕುರಿತು.

**ಉಲ್ಲೇಖ:** 1. W-11011/6/2023-JJM-DDWS-11-8-2023.
**2.** No-W-11011/6//2023-JJM-111-DDWS, ದಿನಾಂಕ: 04/09/2023
**3.**ಅಪರ ಮುಖ್ಯ ಕಾರ್ಯದರ್ಶಿಗಳು, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ರವರ ಅಧ್ಯಕ್ಷತೆಯಲ್ಲಿ ನಡೆದ ಸಭಾ ನಡಾವಳಿಯಂತೆ.
4. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮರವರ ಪತ್ರ ಸಂಖ್ಯೆ:KSDC/CMKKY/Nal Jal Mitra/CR-55/2023-24 ದಿನಾಂಕ: 17.11.2023

******

ಕೇಂದ್ರ ಸರ್ಕಾರದ ಜಲಶಕ್ತಿ ಸಚಿವಾಲಯ ಕುಡಿಯುವ ನೀರು & ನೈರ್ಮಲ್ಯ ಇಲಾಖೆ, ಕೌಶಲ್ಯ ಅಭಿವೃದ್ಧಿ ಉದ್ಯಮಶೀಲತೆ & ಸಚಿವಾಲಯದವರು ಜಲಜೀವನ್ ಮಿಷನ್‌ನಡಿ "ನಲ್ ಜಲ್ ಮಿತ್ರ" ಕಾರ್ಯಕ್ರಮ ಅನುಷ್ಠಾನ ಮಾಡಲು ಸೂಚಿಸಲಾಗಿದೆ. 2019ರಿಂದ ಜಲ್‌ಜೀವನ್ ಮಿಷನ್ ಕಾರ್ಯಕ್ರಮ ಅನುಷ್ಠಾನ ಪ್ರಾರಂಭಿಸಿದ್ದು, ದೇಶಾದ್ಯಾಂತ 12.82 ಕೋಟಿ ಮನೆಗಳಿಗೆ ನಲ್ಲಿ ನೀರು(ನಳಗಳ) ವ್ಯವಸ್ಥೆ ಮಾಡಲಾಗಿದೆ. ಪೈಪ್‌ಗಳ ಮೂಲಕ ನೀರಿನ ವ್ಯವಸ್ಥೆಯ ನಿರಂತರ ಕಾರ್ಯಾಚರಣೆ ಮತ್ತು ನಿರ್ವಹಣೆಯ ಕಡೆ ಹೆಚ್ಚು ಗಮನಹರಿಸಲಾಗಿದ್ದು, ಸದರಿ ಇಲಾಖೆ ಸಂಪೂರ್ಣ ಕಾರ್ಯಕ್ರಮದ ಉಸ್ತುವಾರಿಯನ್ನು ಗ್ರಾಮ ಪಂಚಾಯತಿಗಳು ವಹಿಸಿಕೊಂಡು ಸಂಪೂರ್ಣ ನಿರ್ವಹಣೆ ಮಾಡಲು, ಕಾರ್ಯಕ್ರಮವನ್ನು ರೂಪಿಸಲಾಗಿದೆ.

ಗ್ರಾಮ ಪಂಚಾಯತಿಗಳು ಕಾರ್ಯಕ್ರಮವನ್ನು ನಿರ್ವಹಣೆ ಮಾಡಲು ನುರಿತ ಮಾನವ ಸಂಪನ್ಮೂಲದ ಅವಶ್ಯಕತೆಯಿದ್ದು, ಕೇಂದ್ರ ಸರ್ಕಾರದ ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯಮಶೀಲತೆ ಇಲಾಖೆಯ ಸಹಕಾರದೊಂದಿಗೆ "ನಲ್ ಜಲ್ ಮಿತ್ರ" ಕಾರ್ಯಕ್ರಮವನ್ನು ಅಭಿವೃದ್ಧಿಪಡಿಸಲಾಗಿದೆ. ಈ ಕಾರ್ಯಕ್ರಮದಡಿ ಸ್ಥಳಿಯ ವ್ಯಕ್ತಿಗಳಿಗೆ ಬಹು ಕೌಶಲ್ಯ ತರಬೇತಿಯಡಿ, ಕೊಳಾಯಿ (Plumbing), ವಿದ್ಯುತ್ ಕೆಲಸ(Electrical work), ಕಲ್ಲು ಮಣ್ಣು ಕೆಲಸ(Masonry), ಉಪಕರಣ & ಯಂತ್ರೋಪಕರಣ ರಿಪೇರಿ (Pump operations) ಕೆಲಸಗಳ ಬಹು ಕೌಶಲ್ಯ ತರಬೇತಿ ನೀಡಿ ವೃತ್ತಿಪರ ಶಿಕ್ಷಣ ಮತ್ತು ರಾಷ್ಟ್ರೀಯ ತರಬೇತಿ ಮಂಡಳಿ (NCVET)ಯ ಪ್ರಮಾಣ ಪತ್ರ ನೀಡುವುದಾಗಿದೆ.

## ಕಾರ್ಯಕ್ರಮ ಅನುಷ್ಠಾನದ ಮಾರ್ಗಸೂಚಿಗಳು

1. ರಾಜ್ಯದಲ್ಲಿ ಜಲ್‌ಜೀವನ್ ಮಿಷನ್- ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ಇಲಾಖೆ (RDWSS), ಹಾಗೂ ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ (KSDC) ವು ಯೋಜನಾ ಅನುಷ್ಠಾನ ಸಂಸ್ಥೆ (PIA) ಯಾಗಿ ಕಾರ್ಯಗತಗೊಳಿಸಬೇಕು, ಹಾಗೂ ನಿಕಟ ಸಮನ್ವಯದೊಂದಿಗೆ ಕಾರ್ಯ ನಿರ್ವಹಿಸಬೇಕು.
2. ಪ್ರತಿ ಗ್ರಾಮ ಪಂಚಾಯಿತಿಯಿಂದ ಇಬ್ಬರಿಗೆ ತರಬೇತಿ ನೀಡಿ & ಪ್ರಮಾಣ ಪತ್ರ ನೀಡಬೇಕು.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ನೇತೃತ್ವ ವಹಿಸಿ, ತಮ್ಮ ಜಿಲ್ಲೆಯ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕು.
4. ಪ್ರತಿ ಗ್ರಾಮ ಪಂಚಾಯಿತಿಯಿಂದ ಸ್ವ-ಸಹಾಯ ಸಂಘದ 2 ಸದಸ್ಯರನ್ನು ಗ್ರಾಮ ಪಂಚಾಯತಿ ಒಕ್ಕೂಟಗಳು ಗುರುತಿಸಿ/ಆಯ್ಕೆ ಮಾಡಿ ಗ್ರಾಮ ಪಂಚಾಯತಿ ಅಧ್ಯಕ್ಷರು ಹಾಗೂ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಸಹಮತದೊಂದಿಗೆ ಆಯ್ಕೆ ಮಾಡಿ ಅಂತಿಮ ಸದಸ್ಯರ ಪಟ್ಟಿಯನ್ನು ಜಿಲ್ಲಾ ಪಂಚಾಯತಿಯ ಮೂಲಕ ಸಂಜೀವಿನಿ-KSRLPS ರಾಜ್ಯ ಕಚೇರಿಗೆ ಸಲ್ಲಿಸಬೇಕು.
5. ಪ್ರತಿ ಅಭ್ಯರ್ಥಿಗೆ ₹.24,790/-ರಂತೆ ಪ್ರತಿ ಗ್ರಾಮ ಪಂಚಾಯಿತಿಯಿಂದ 2 ಅಭ್ಯರ್ಥಿಗಳಿಗೆ ತಗಲುವ ತರಬೇತಿ ವೆಚ್ಚವನ್ನು ಆಯಾಯ ಗ್ರಾಮ ಪಂಚಾಯತಿಗಳು 15ನೇ ಹಣಕಾಸು ಆಯೋಗದ ಹಾಗೂ ಇತರೆ ಅನುದಾನದಿಂದ ಭರಿಸಬೇಕು.
6. ತರಬೇತಿ ವೆಚ್ಚವನ್ನು **ಉಲ್ಲೇಖ (4)** ರ ಪತ್ರದಲ್ಲಿ ತಿಳಿಸಿರುವ ಈ ಕೆಳಕಂಡ ಖಾತೆಗೆ ಭರಿಸುವುದು.

   **Bank Account Details:**

   Account Name: KARNATAKA ITI UDYOGA SOCIETY

   Account Number: 00000041308406633

   Bank Name: State Bank of India

   Branch: NIMHANS Branch

   IFSC Code: SBIN0040675
7. ಸದಸ್ಯರ ಆಯ್ಕೆಯ ಅರ್ಹತಾ ಮಾನದಂಡಗಳು:-
   - ಮಹಿಳಾ ಸ್ವ-ಸಹಾಯ ಸಂಘದ ಸದಸ್ಯರಾಗಿರಬೇಕು.
   - ವಿದ್ಯಾರ್ಹತೆ.

   12ನೇ ತರಗತಿ ಪಾಸ್

   ಅಥವಾ

   10ನೇ ತರಗತಿ ನಂತರ 3ವರ್ಷದ ಡಿಪ್ಲೊಮ (ಸಿವಿಲ್ ಇಂಜಿನಿಯರಿಂಗ್) ಮಾಡುತ್ತಿರುವವರು.

   ಅಥವಾ

   10ನೇ ತರಗತಿ ಪಾಸ್/I.T.I ಜೊತೆಗೆ 2 ವರ್ಷದ ಸಂಬಂಧಿತ ಕೆಲಸದ ಅನುಭವ ಹೊಂದಿರಬೇಕು.

   ಅಥವಾ

   8ನೇ ತೇರ್ಗಡೆ ಜೊತೆಗೆ 2 ವರ್ಷದ ರಾಷ್ಟ್ರೀಯ ಟ್ರೇಡ್ ಸರ್ಟಿಫಿಕೆಟ್ (NTC) ಮತ್ತು 2 ವರ್ಷದ ಅನುಭವ ಹೊಂದಿರಬೇಕು.

- ವಯಸ್ಸು 20 ರಿಂದ 40 ವರ್ಷದವರೆಗೆ
- ಒಟ್ಟು ಕೋರ್ಸ್ ಅವಧಿ-510 ಗಂಟೆಗಳು.

ಸಾಫ್ಟ್ ಸ್ಕಿಲ್ಸ್ ಮತ್ತು ಎಂಪ್ಲಾಯಬಿಲಿಟಿ ಕೌಶಲ್ಯ ಸೇರಿದಂತೆ

1. ತರಗತಿ ಅವಧಿ- 120 ಗಂಟೆಗಳು.
2. ಲ್ಯಾಬ್ ತರಬೇತಿ-210 ಗಂಟೆಗಳು.
3. ಕರ್ತವ್ಯ ನಿರತ ತರಬೇತಿ (OJT)- 180 ಗಂಟೆಗಳು

**8.** ತರಬೇತಿ ಪಡೆದ ಸದಸ್ಯರಿಗೆ 2 ಜೊತೆ ಸಮವಸ್ತ್ರಗಳ ಮೇಲೆ "ಅಮಲನಾಯಕಿ"ಯ ಲೋಗೋ ಸೇರಿಸಿ ಹಾಗೂ ನಿರ್ದಿಷ್ಟ ಉಪಕರಣಗಳ (tool kit) ನ್ನು RDWSS ರವರು ಒದಗಿಸಬೇಕು.

**9.** ಮಾರ್ಚ್-2024ರ ಒಳಗಾಗಿ ಪ್ರತಿ ಜಿಲ್ಲೆಯಲ್ಲಿ ಆಯ್ಕೆ ಮಾಡಿದ ಎಲ್ಲಾ ಸದಸ್ಯರಿಗೆ ತರಬೇತಿಯನ್ನು ಮುಗಿಸಬೇಕು.

**10.** ಕರ್ನಾಟಕ ರಾಜ್ಯ ಕೌಶಲ್ಯ ಅಭಿವೃದ್ಧಿ ನಿಗಮ (KSDC) ವು ಸ್ಥಳಿಯ I.T.I ಮೂಲಕ ತಾಲ್ಲೂಕು/ಹೋಬಳಿ ಮಟ್ಟದಲ್ಲಿ ತರಬೇತಿಯನ್ನು ಆಯೋಜಿಸಬೇಕು.

**ತಾಲ್ಲೂಕು ಸಮಿತಿ ರಚನೆ**

ಸದರಿ ತರಬೇತಿಯನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಲು ತಾಲ್ಲೂಕು ಮಟ್ಟದಲ್ಲಿ ಸಹಾಯಕ ನಿರ್ದೇಶಕರು, ಪಂಚಾಯತ್ ರಾಜ್ (AD PR) ತಾಲ್ಲೂಕು ಪಂಚಾಯಿತಿರವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಬೇಕು.

1. ಸಹಾಯಕ ನಿರ್ದೇಶಕರು-ಅಧ್ಯಕ್ಷರು
2. ತಾಲ್ಲೂಕು/ಸ್ಥಳಿಯ I.T.I - ಪ್ರಾಂಶುಪಾಲರು-ಸದಸ್ಯರು
3. ಸಹಾಯಕ ಶಿಶು ಅಭಿವೃದ್ಧಿ ಅಧಿಕಾರಿ (ACDPO)/ ಕೈಗಾರಿಕೆ ವಿಸ್ತರಣಾಧಿಕಾರಿ-ಸದಸ್ಯರು
4. ಸಂಜೀವಿನಿ-ಕೆ.ಎಸ್.ಆರ್.ಎಲ್.ಪಿ.ಎಸ್‌ನ, ತಾಲ್ಲೂಕು ಕಾರ್ಯಕ್ರಮ ವ್ಯವಸ್ಥಾಪಕರು (TPM) – ಸದಸ್ಯರು.

ಸದರಿ ಸಮಿತಿಯು 15 ದಿನಗಳಿಗೊಮ್ಮೆ ಸಭೆ ನಡೆಸಿ ಪ್ರಗತಿ ವರದಿಯನ್ನು ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ-ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸಲ್ಲಿಸಬೇಕು. ಮೇಲಿನ ಅಂಶಗಳಂತೆ ಕ್ರಮವಹಿಸಲು ತಿಳಿಸಲಾಗಿದೆ.

(ಶ್ರೀ ವಿದ್ಯಾ ಪಿ.ಐ, ಭಾ.ಆ.ಸೇ)
ಅಭಿಯಾನ ನಿರ್ದೇಶಕರು,
ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್,
ಬೆಂಗಳೂರು.

(ಪ್ರಿಯಾಂಕ ಮೇರಿ ಫ್ರಾನ್ಸಿಸ್., ಭಾ.ಆ.ಸೇ)
ಆಯುಕ್ತರು,
ಪಂಚಾಯತ್ ರಾಜ್ ಆಯುಕ್ತಾಲಯ,
ಬೆಂಗಳೂರು.

**ಪ್ರತಿಯನ್ನು:**

1. ಅಪರ ಮುಖ್ಯ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.

2. ಅಪರ ಮುಖ್ಯ ಕಾರ್ಯದರ್ಶಿಗಳು, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಬೆಂಗಳೂರು.
3. ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
4. ಆಯುಕ್ತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರು.
5. ಆಯುಕ್ತರು, ಕೈಗಾರಿಕಾ ತರಬೇತಿ ಮತ್ತು ಉದ್ಯೋಗ, ಬೆಂಗಳೂರು.
6. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
7. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ರಾಜ್ಯದ ಎಲ್ಲಾ ಜಿಲ್ಲೆಗಳು.
8. ಯೋಜನಾ ನಿರ್ದೇಶಕರು (ಡಿ.ಆರ್.ಡಿ.ಎ.), ಜಿಲ್ಲಾ ಪಂಚಾಯತ್, ರಾಜ್ಯದ ಎಲ್ಲಾ ಜಿಲ್ಲೆಗಳು.
9. ಕಚೇರಿ ಪ್ರತಿ.